# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 136 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 08.12.2025 |
| ಉತ್ತರಿಸುವ ಸಚಿವರು | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಅನುಷ್ಠಾನವಾಗಿದೆಯೇ ಮತ್ತು ಇದರಡಿ ಸರಬರಾಜುದಾರರಿಗೆ ಯಾವ ನಿಯಮಗಳನ್ನು ವಿಧಿಸಲಾಗಿದೆ; ರಾಜ್ಯ ಸರ್ಕಾರದ ವತಿಯಿಂದ ಇಲ್ಲಿಯವರೆಗೆ ಎಷ್ಟು ಅನರ್ಹ ಪಡಿತರ ಚೀಟಿಗಳನ್ನು ಗುರುತಿಸಲಾಗಿದೆ; ಈ ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕೇಂದ್ರ ಸರ್ಕಾರವು ಆಹಾರ ಕಲಬೆರಕೆ ತಡೆ ಕಾಯ್ದೆ, 1954 ಅನ್ನು ನಿರಸನಗೊಳಿಸಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ, 2006 ಜಾರಿಗೆ ಬಂದಿರುತ್ತದೆ. ಆಹಾರ ಸುರಕ್ಷತಾ ಮತ್ತು ಗುಣಮಟ್ಟದ ಕುರಿತು 2011 ರಲ್ಲಿ ಆಹಾರ ಮಾನಂಡಗಳನ್ನು ನಿಗದಿಪಡಿಸಲಾಗಿರುತ್ತದೆ ಹಾಗೂ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ.<br><br>ಸದರಿ ನಿಯಮಗಳಡಿ ಸರಬರಾಜುದಾರರು ರಾಜ್ಯ ಅಥವಾ ಕೇಂದ್ರ FSSA ವತಿಯಿಂದ ಆಹಾರ ಪರವಾನಿಗೆ/ನೊಂದಣಿಗಳನ್ನು ಪಡೆಯಬೇಕು. Food Safety and Standard (Licensing and Registration of Food Businesses Regulation, 2011 ಅನ್ನು ಪಾಲಿಸಬೇಕಾಗಿರುತ್ತದೆ.<br><br>ಸರ್ಕಾರದ ಮಾನದಂಡಗಳ ವಿರುದ್ಧವಾಗಿ ಐ.ಟಿ. ತೆರಿಗೆ ಪಾವತಿದಾರರು, ವಾರ್ಷಿಕ ರೂ.1.20 ಲಕ್ಷಕ್ಕಿಂತ ಹೆಚ್ಚು, ಆದಾಯವಿರುವ ಫಲಾನುಭವಿಗಳು, ಸರ್ಕಾರಿ ನೌಕರರು, ಮೃತ ಫಲಾನುಭವಿಗಳು, ಮತ್ತು, 6 ತಿಂಗಳಿನಿಂದ ಪಡಿತರವನ್ನು ಪಡೆಯದೇ ಇರುವ ಆದ್ಯತಾ ಪಡಿತರ ಚೀಟಿದಾರರ ಮಾಹಿತಿಯನ್ನು ತಂತ್ರಾಂಶದಿಂದ ಪಡೆಯಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ. |

<table>
<tr>
<td></td>
<td></td>
<td>
<table>
<tr><th>ಕ್ರ.ಸಂ</th><th>ವಿವರ</th><th>ಗುರುತಿಸಲಾದ ಅನರ್ಹ ಪಡಿತರ ಚೀಟಿ</th></tr>
<tr><td>1</td><td>Ration Not taken in last 6 months</td><td>2,57,667</td></tr>
<tr><td>2</td><td>Income Tax Payee</td><td>98,473</td></tr>
<tr><td>3</td><td>Income greater than 1.20,000</td><td>10,09,475</td></tr>
<tr><td>4</td><td>HRMS - Govt employee</td><td>4036</td></tr>
<tr><td></td><td>ಒಟ್ಟು</td><td>13,87,651</td></tr>
</table>
ಇದರಲ್ಲಿ ಮೃತ ಫಲಾನುಭವಿಗಳನ್ನು ತಂತ್ರಾಂಶದಿಂದ ತೆಗೆದುಹಾಕಲಾಗಿದ್ದು, ಉಳಿದ ಫಲಾನುಭವಿಗಳನ್ನು ಅಮಾನತ್ತು/ ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲು ಕ್ರಮವಹಿಸಲಾಗಿತ್ತು.<br><br>
ಸರ್ಕಾರದ ಆದೇಶ ಸಂಖ್ಯೆ: ಅನಾಸ 337 ಡಿಆರ್‌ಎ 2024 ದಿನಾಂಕ:22-11-2024 ರ ಆದೇಶದ ಮೇರೆಗೆ ಸರ್ಕಾರಿ ನೌಕರರು ಮತ್ತು ಆದಾಯ ತೆರಿಗೆ ಪಾವತಿದಾರರನು ಹೊರತುಪಡಿಸಿ ಉಳಿದ ಎಲ್ಲಾ ಪಡಿತರ ಚೀಟಿಗೆಳನ್ನು ಆದ್ಯತಾ ಪಡಿತರ ಚೀಟಿಗಳನ್ನಾಗಿ ಮರುಸ್ಥಾಪಿಸಲಾಗಿರುತ್ತದೆ.
</td>
</tr>
<tr>
<td>ಆ</td>
<td>ಅನರ್ಹ ಪಡಿತರ ಚೀಟಿಗಳ ರದ್ದತಿ ಬಗ್ಗೆ ಕೇಂದ್ರ ಸರ್ಕಾರದ ನಿಯಮಾವಳಿಗಳೇನು; ಮತ್ತು ಅನರ್ಹ ಪಡಿತರ ಚೀಟಿಗಳನ್ನು ವಿತರಿಸುವಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ;</td>
<td>ಕೇಂದ್ರ ಸರ್ಕಾರದಿಂದ ಈ ಕೆಳಕಂಡ ವಿಧಗಳಲ್ಲಿ 7,76,206 ಶಂಕಾಸ್ಪದ ಪಡಿತರ ಫಲಾನುಭವಿಗಳನ್ನು ಗುರುತಿಸಲಾಗಿರುತ್ತದೆ.<br>
1. CBDT Income Group Annual Income > 1,20,000<br>
2. GSTN Gross Turnover >25 Lacs<br>
3. MCA Individual as Director<br>
4. PDS Duplicate RC Inter State<br>
5. PDS Duplicate RC Intra State<br>
6. PDS RC Member Above 100 Years<br>
7. PDS Silent RC >12 Months<br>
8. PDS Silent RC 6-12 Months<br>
9. PDS Single Member Below 18 Years<br>
10. PM KISAN Land Holding >7.5 Acres<br>
11. UIDAI Aadhaar Status
</td>
</tr>
</table>

**Deceased**

**12. Vehicle Ownership value Owning LIGHT MOTOR VEHICLE**

**13. Vehicle Ownership value Owning MEDIUM MOTOR VEHICLE**

**14. Vehicle Ownership value Owning OTHER THAN MENTIONED ABOVE**

ರಾಜ್ಯದಲ್ಲಿ ಅರ್ಹತಾ ಪಡಿತರ ಚೀಟಿಗಳನ್ನು ಪಡೆಯುವ ಬಗ್ಗೆ ಸರ್ಕಾರವು **2017** ರಲ್ಲಿ ಈ ಕೆಳಕಂಡಂತೆ ಹೊರಗಿಡುವ ಮಾನದಂಡಗಳನ್ನು ರೂಪಿಸಿದೆ.

1. ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ ನಿಗಮಗಳು/ ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ಜಿಎಸ್‌ಟಿ/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.
2. ಗ್ರಾಮೀಣ ಪ್ರದೇಶಗಳಲ್ಲಿ **03** ಹೆಕ್ಟರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ **1000** ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.
3. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.
4. ಕುಟುಂಬದ ವಾರ್ಷಿಕ ಆದಾಯವು ರೂ. **1.20** ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.

ಸದರಿ ಮಾನದಂಡಗಳ ವಿರುದ್ಧವಾಗಿ ಪಡೆದಿರುವ ಅರ್ಹತಾ ಪಡಿತರ ಚೀಟಿಗಳನ್ನು ಪತ್ತೆಹಚ್ಚಿ ಸದರಿ ಪಡಿತರ

| | | |
|---|---|---|
| | | ಚೀಟಿಗಳನ್ನು ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲು ಕ್ರಮವಹಿಸಲಾಗಿರುತ್ತದೆ.<br>ಅನರ್ಹ ಪಡಿತರ ಚೀಟಿಗಳನ್ನು ವಿತರಿಸುವಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ದೂರುಗಳು ಸ್ವೀಕೃತವಾದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ. |
| ಇ | ಜನಸಾಮಾನ್ಯರಿಗೆ ಆಹಾರ ಪೂರೈಕೆ ವ್ಯವಸ್ಥೆಯಲ್ಲಿ ಆಗುತ್ತಿರುವ ಸಮಸ್ಯೆಗಳೇನು ಹಾಗೂ ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ಮಾಹಿತಿ ನೀಡುವುದು) | ಆಹಾರ ಇಲಾಖೆಯ ವತಿಯಿಂದ ಅರ್ಹ ಅಂತ್ಯೋದಯ ಮತ್ತು ಆದ್ಯತಾ ಪಡಿತರ ಫಲಾನುಭವಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿಯಮಗಳಂತೆ ಪ್ರತಿ ಮಾಹೆ ಅಕ್ಕಿ ಹಾಗೂ ಲಭ್ಯತೆಗನುಗುಣವಾಗಿ ರಾಗಿ ಮತ್ತು ಜೋಳವನ್ನು ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ. ವಿತರಣೆಯಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ |
| ಈ | ಅಂಗನವಾಡಿಗಳ ಶಾಲೆಗಳು, ಸರ್ಕಾರಿ ಕಚೇರಿ ಕ್ಯಾಂಟೀನ್‌ಗಳು ಮತ್ತು ಅವುಗಳಿಗೆ ಆಹಾರ ಪೂರೈಕೆಗಾಗಿ ನಿಯಮಿತ ಪರಿಶೀಲನೆ ಮತ್ತು ಅನುಮತಿ ವ್ಯವಸ್ಥೆ ಯಾವ ರೀತಿ ಇರುತ್ತದೆ? (ಮಾಹಿತಿ ನೀಡುವುದು) | ಅಂಗನವಾಡಿ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಉತ್ತಮ ಗುಣಮಟ್ಟದ ಪೂರಕ ಪೌಷ್ಟಿಕ ಆಹಾರ ಪೂರೈಸಲು ಈ ಕೆಳಕಂಡ ಕಟ್ಟುನಿಟ್ಟಿನ ವ್ಯವಸ್ಥೆಯನ್ನು ಅನುಸರಿಸಲಾಗುತ್ತದೆ.<br>1. ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ: **07-10-2004**ರ ಆದೇಶದ ಸೂಚನೆಯಂತೆ **2008** ರಿಂದ ಇಲ್ಲಿಯವರೆಗೆ ಸರ್ಕಾರದ ವತಿಯಿಂದಲೇ ಸ್ಥಾಪಿಸಲಾದ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಕೇಂದ್ರ (ಎಂ.ಎಸ್.ಪಿ.ಸಿ.) ಗಳಿಂದ ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿನ ಫಲಾನುಭವಿಗಳಿಗೆ ಪೂರಕ ಪೌಷ್ಟಿಕ ಆಹಾರವನ್ನು ಸರಬರಾಜು ಮಾಡಲಾಗುತ್ತಿದೆ. ಈ ಎಂ.ಎಸ್.ಪಿ.ಸಿಗಳು ಆಹಾರ ಉತ್ಪಾದನೆ ಹಾಗೂ ಪ್ಯಾಕಿಂಗ್‌ಗೆ ಸಂಬಂಧಿಸಿದಂತೆ **FSSAI** ನಿಂದ ಪರವಾನಗಿ ಪಡೆದಿರುತ್ತದೆ.<br>2. ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಆಹಾರ ಪದಾರ್ಥಗಳನ್ನು ವಿತರಿಸುವ ಮುನ್ನ **NABL (National Accreditation Board for Testing and Calibration Laboratories)** ನಲ್ಲಿ ನೋಂದಾಯಿತವಾದ ಪ್ರಯೋಗಾಲಯಗಳ ಮೂಲಕ ಆಹಾರದಲ್ಲಿನ ಪೌಷ್ಟಿಕಾಂಶಗಳ ಗುಣಮಟ್ಟ ಮತ್ತು ನಿಯತಾಂಕಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ಉತ್ತಮ |

| | | |
|---|---|---|
| | | ಗುಣಮಟ್ಟದ ಪೂರಕ ಪೌಷ್ಠಿಕ ಆಹಾರವನ್ನು ಎಂ.ಎಸ್.ಪಿ.ಸಿಗಳಿಂದ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಲಾಗುತ್ತಿದೆ.<br>3. ಅಂಗನವಾಡಿ ಕೇಂದ್ರದ ಫಲಾನುಭವಿಗಳಿಗೆ ಸಕಾಲದಲ್ಲಿ ಉತ್ತಮ ಗುಣಮಟ್ಟದ ಪೂರಕ ಪೌಷ್ಠಿಕ ಆಹಾರವನ್ನು ಪೂರೈಸಲು ಮತ್ತು ಅದರ ಮೇಲ್ವಿಚಾರಣೆ ಮಾಡಲು ಅನುಕೂಲವಾಗುವಂತೆ, ಪ್ರತಿ ತಿಂಗಳು ಫಲಾನುಭವಿಗಳ ವಿವರಗಳೊಂದಿಗೆ ಬೇಡಿಕೆಯನ್ನು (ಇಂಡೆಂಟ್) ಎಂ.ಎಸ್.ಪಿ.ಸಿಗಳಿಗೆ ಸಲ್ಲಿಸಲಾಗುತ್ತಿದೆ. ಬೇಡಿಕೆಗೆ ಅನುಗುಣವಾಗಿ ಎಂ.ಎಸ್.ಪಿ.ಸಿಗಳು ಆಹಾರ ಪದಾರ್ಥಗಳನ್ನು ನೇರವಾಗಿ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುತ್ತವೆ.<br>4. ಪೂರಕ ಪೌಷ್ಠಿಕ ಆಹಾರವು ಸಕಾಲಕ್ಕೆ ಪೂರೈಕೆಯಾಗುತ್ತಿರುವುದನ್ನು ಮತ್ತು ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ವಿತರಣೆಯಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳಲು, ಕೇಂದ್ರ ಸರ್ಕಾರದ ಪೋಷಣ್ ಟ್ರ್ಯಾಕರ್ ಅಪ್ಲಿಕೇಶನ್ ಹಾಗೂ ಫೇಸ್ ರೆಕಗ್ನಿಷನ್ ಸಿಸ್ಟಮ್ (FRS) ಮೂಲಕ ನೈಜ ಸಮಯದಲ್ಲಿ ಮೇಲ್ವಿಚಾರಣೆ ಮಾಡಲಾಗುತ್ತದೆ. ಇದರೊಂದಿಗೆ, ಪ್ರತಿ ಅಂಗನವಾಡಿಯಲ್ಲಿ ಬಾಲವಿಕಾಸ ಸಮಿತಿ ಹಾಗೂ ಜಿಲ್ಲಾ ಮಟ್ಟದಲ್ಲಿ ಮೇಲ್ವಿಚಾರಣಾ ಸಮಿತಿಯನ್ನು ಸಹ ರಚಿಸಲಾಗಿದೆ.<br>5. ಇಲಾಖೆಯ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಅಂಗನವಾಡಿ ಕೇಂದ್ರಗಳ ಕುರಿತು ಕಟ್ಟುನಿಟ್ಟಿನ ಮೇಲ್ವಿಚಾರಣೆ ಮಾಡಲು ಹಾಗೂ ಜವಾಬ್ದಾರಿ ಕಾರ್ಯನಿರ್ವಹಣೆಯನ್ನು ಖಾತ್ರಿ ಪಡಿಸಿಕೊಳ್ಳಲು ಸೂಚಿಸಲಾಗಿದೆ. |

**ಇ-ಆನಾಪ 305 ಡಿಆರ್ಎ 2025**

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಇಲಾಖಾ ಸಚಿವರು